5. ಅಪಹರಣ ಅಥವಾ ಸರಗಳ್ಳತನ ಆದ ಕೂಡಲೇ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಅತಿ ಜರೂರಾಗಿ ಮಾಹಿತಿ ನೀಡುವಂತೆ ನಿಯಂತ್ರಣ ಕೊಠಡಿಯನ್ನು ಚುರುಕುಗೊಳಿಸಲಾಗಿದೆ.

6. ಬೆಂಗಳೂರು ನಗರದಲ್ಲಿ50 ಮೊಬೈಲ್ ವಾಹನಗಳು ದಿನಾಂಕ :26-7-97 ರಿಂದ ಹಗಲು-ರಾತ್ರಿ ಗಸ್ತುತಿರುಗುತ್ತಿದ್ದು ಅಪಹರಣ, ಸರಗಳ್ಳತನಗಳನ್ನು ತಡೆಗಟ್ಟಲು ಮತ್ತು ರೌಡಿಗಳನ್ನು ನಿಯಂತ್ರಿಸಲು ಹಾಗೂ ಇತರ ಚಟುವಟಿಕೆಗಳ ಮೇಲೆ ಸದಾ ನಿಗಾ ಇಡಲು ಜಾಗೃತವಾಗಿರುತ್ತವೆ.

ಸ್ವಾತಂತ್ಯದ ಸ್ವರ್ಣ ಮಹೋತ್ಸವದಲ್ಲಿ ಖೈದಿಗಳ ಬಿಡುಗಡೆ

1738 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಾರಾಗೃಹ, ಗಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಾತಂತ್ರೋತ್ಸವ ಸ್ವರ್ಣ ಮಹೋತ್ಸವದ ಸಂಧರ್ಭದಲ್ಲಿ ಸರ್ಕಾರವು ಖೈದಿಗಳನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಜನ ಖೈದಿಗಳನ್ನು ಬಿಡುಗಡೆ ಮಾಡಲಾಗುವುದು?

ಇ) ವಿಚಾರಣಾಧೀನ ಬಂದಿಗಳ ಪೈಕಿ ಎಷ್ಟು ಜನರನ್ನು ಈ ಸಂಧರ್ಭದಲ್ಲಿ ಬಿಡುಗಡೆ ಮಾಡಲಾಗುವುದು?

ಈ) ಬಿಡುಗಡೆ ಖೈದಿಗಳಿಗೆ ಈ ಸಂಧರ್ಭದಲ್ಲಿ ಸರ್ಕಾರದಿಂದ ಉದ್ಯೋಗ ಕೈಗೊಳ್ಳುವುದಕ್ಕೆ ಧನ ಸಹಾಯ ನೀಡುವುದೇ?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) ಪರಿಶೀಲಿಸಲಾಗುತ್ತಿದೆ.

ಆ) 12 ವರ್ಷ ವಾಸ್ತವಿಕ ಸಜೆಯನ್ನು ಅನುಭವಿಸಿದ 37 ಜನ ಜೀವಾವಧಿ ಖೈದಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಯಾರೂ ಇಲ್ಲ

ಈ) ಇಲ್ಲ